**ಪಿ.ಡಬ್ಲೂ ಃ 1**

**ಸಾಕ್ಷಿಗೆ ದಿನಾಂಕಃ 11.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ವಕೀಲರ ಮೂಲಕ ಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮೃತ ವ್ಯಕ್ತಿಯು ನನ್ನ ಪತಿ ಆಗಿರುತ್ತಾರೆ. ದೊಡ್ಡರಸಿಕೆರೆಯ ಸಾಗರ್ ನನಗೆ ಪರಿಚಯಸ್ಥರು ಎಂದರೆ ಸರಿ. ನನ್ನ ಪತಿ ಆ ದಿನ ಚಾಲನೆ ಮಾಡುತ್ತಿದ್ದ ಬೈಕ್ ನಮಗೆ ಸೇರಿದ್ದಾಗಿರುತ್ತದೆ. ಸದರಿ ಬೈಕ್‌ಗೆ ವಿಮೆ ಇತ್ತೊ ಇಲ್ಲವೋ ಮತ್ತು ನನ್ನ ಪತಿಗೆ ಚಾಲನಾ ಪರವಾನಿಗೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ ನನ್ನ ಪತಿಯು ಮರದ ಕೆಲಸಕ್ಕೆ ಹಲಗೂರಿಗೆ ಹೋಗುತ್ತಿದ್ದರು. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತದ ವಿಚಾರವನ್ನು ನನಗೆ ನನ್ನ ಮಗನು ತಿಳಿಸಿರುತ್ತಾರೆ. ಅಪಘಾತದ ಸ್ಥಳದಿಂದ ನನ್ನ ಪತಿಯನ್ನು ನಮ್ಮ ಹುಡುಗ ಹಲಗೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಪಘಾತದ ಬಗ್ಗೆ ದೂರನ್ನು ನನ್ನ ಮಗ ನೀಡಿರುತ್ತಾರೆ. ಅಪಘಾತವಾದ ದಿನದಂದೇ ದೂರನ್ನು ನೀಡಿರುತ್ತಾರೆ. ಹಲಗೂರು ಆಸ್ಪತ್ರೆಯಿಂದ ನನ್ನ ಪತಿಯನ್ನು ಕೆ.ಎಂ. ದೊಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಪಘಾತವು ಯಾವ ರೀತಿ ಆಯಿತು ಎಂದು ಹಲಗೂರು ಆಸ್ಪತ್ರೆಯ ವೈದ್ಯರಿಗೆ ನನ್ನ ಮಗನು ಹೇಳಿ ಬರೆಸಿರುತ್ತಾರೆ. ಹಲಗೂರು ಆಸ್ಪತ್ರೆಯಿಂದ ಕೆ.ಎಂ. ದೊಡ್ಡಿಗೆ ಮತ್ತು ಅಲ್ಲಿಂದ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನನ್ನ ಪತಿಯ ಮರಣೋತ್ತರ ಪರೀಕ್ಷೆಯನ್ನು ಎಲ್ಲಿ ಮಾಡಿಸಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ.

**2.** ನಮಗೆ ಒಬ್ಬ ಮಗ ಮತ್ತು ಮಗಳು ಇರುತ್ತಾರೆ. ಈಗ ನೋಡುತ್ತಿರುವುದು ನಮ್ಮ ಕುಟುಂಬದ ಪಡಿತರ ಚೀಟಿ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಆರ್. **1** ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವುದು ನನ್ನ ಮತ್ತು ನನ್ನ ಮಕ್ಕಳ ಆಧಾರ್ ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳು ಎಂದರೆ ಸರಿ. ಸದರಿ ದಾಖಲೆಗಳನ್ನು ನಿ.ಆರ್. **2** ರಿಂದ **4** ಎಂದು ಗುರುತಿಸಲಾಯಿತು. ನನ್ನ ಮಗಳು ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಮಗೆ ಸೇರಿದಂತೆ **10** ಗುಂಟೆ ಜಮೀನು ಇರುತ್ತದೆ. ಆ ಸಂಬಂಧವಾಗಿ ಪಹಣಿಯನ್ನು ಹಾಜರುಪಡಿಸಿರುವುದಿಲ್ಲ. ನಮಗೆ ಸೇರಿದ ಜಮೀನಿನಲ್ಲಿ ನನ್ನ ಮಗನು ಈಗ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಪೊಲೀಸರು ನನ್ನ ಗಂಡನ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಗಂಡನು ಕಾನೂನಿನ ನಿಯಮಗಳನ್ನು ಉಲ್ಲಂಘಿಸಿ, ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಮರದ ಕೆಲಸ ಮಾಡುತ್ತಿದ್ದರು. ನನ್ನ ಪತಿಯು **30** ಸಾವಿರ ಆದಾಯ ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ **2** ಲಕ್ಷ ಮತ್ತು ಶವ ಸಾಗಾಣಿಕೆಗಾಗಿ **20** ಸಾವಿರ ರೂಗಳು ಮತ್ತು ತಿಥಿಗೆ **2** ಲಕ್ಷ ರೂ.ಗಳು ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿಗೆ **62** ವರ್ಷ ವಯಸ್ಸಾಗಿತ್ತು, ಅವರು ಯಾವುದೇ ವೃತ್ತಿಯನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನಗೆ 1ನೇ ಎದುರುದಾರರು ಪರಿಚಯಸ್ಥರಾದ ಕಾರಣ ಪೊಲೀಸರ ಜೊತೆ ಸೇರಿ ದೂರನ್ನು ಸೃಷ್ಟಿ ಮಾಡಿ, 3 ದಿನಗಳ ನಂತರ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪತಿಯನ್ನು ನನ್ನ ಮಗನು ಪೋಷಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಪತಿಯ ತಪ್ಪಿನಿಂದ ಅಪಘಾತವಾಗಿರುವುದರಿಂದ 2ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.